## ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ

## ಫೌಜುದಾರಿ ಪ್ರಕರಣ ಸಂಖ್ಯೆ: 69/2023

ಫಿರ್ಯಾದಿಃ ಸರಕಾರದ ಪರವಾಗಿ
ಪೋಲಿಸ್ ವೃತ್ತ ನಿರೀಕ್ಷಕರು,
ಭಟ್ಕಳ ಗ್ರಾಮಾಂತರ ವೃತ್ತ,
ಪ್ರಭಾರ ಹೊನ್ನಾವರ ಪೋಲಿಸ್ ಠಾಣೆ

**-ವಿರುದ್ಧ-**

ಆರೋಪಿಃ 1) ರಮೇಶ ತಂದೆ ಸುಬ್ರಾಯ ಮುಕ್ರಿ,
ವಯಸ್ಸುಃ 23 ವರ್ಷಗಳು,
ಉದ್ಯೋಗಃ ಕೂಲಿ ಕೆಲಸ,
ಸಾಕೀನಃ ಜನತಾ ಕಾಲೋನಿ, ಚಂದಾವರ,
ತಾಲೂಕುಃ ಹೊನ್ನಾವರ.

## ಆರೋಪಣೆ

ಶ್ರೀ ಬಿ.ಸಿ. ಚಂದ್ರಶೇಖರ್, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು 1ನೇ ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ಆರೋಪಣೆಗಳನ್ನ ಹೊರೆಸುತ್ತಿದ್ದೇನೆ.

1.ಮೊದಲೇಯದಾಗಿ ದಿನಾಂಕಃ 02-01-2022 ರಂದು ರಾತ್ರಿ 08-00 ರ ಸಮಯದಲ್ಲಿ 1 ನೇ ಆರೋಪಿಯಾದ ನೀವು ಹೊನ್ನಾವರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಚಂದವಾರ-ಅರೇಅಂಗಡಿ ರಸ್ತೆಯ ಮೇಲೆ ಹಿರೋ ಹೊಂಡಾ ಸ್ಪೆಂಡರ್ ಪ್ಲಸ್ ಮೋಟಾರು ಸೈಕಲ್ ಸಂಖ್ಯೆಃಕೆಎ-47/ಈ-7741 ನ್ನು ಹೊನ್ನಾವರ(ಅರೇಅಂಗಡಿ) ಕಡೆಯಿಂದ ಚಂದಾವರ ನಾಕಾ ಕಡೆಗೆ ಅತಿವೇಗ ಅಥವಾ ಅಜಾಗರೂಕತೆಯಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಹೋಗಿ ಹರಿಜನಕೇರಿ ಕ್ರಾಸ್ ಹತ್ತಿರ ಒಮ್ಮೆಲೆ ನಿಷ್ಕಾಳಜಿತನದಿಂದ ಬಲಕ್ಕೆ ಚಲಾಯಿಸಿ, ಎದುರಿನಿಂದ ಅಂದರೆ ಚಂದಾವರ ನಾಕಾ ಕಡೆಯಿಂದ ಹೊನ್ನಾವರ(ಅರೇಅಂಗಡಿ) ಕಡೆಗೆ ಸವಾರಿ ಮಾಡಿಕೊಂಡು ಬರುತ್ತಿದ್ದ ಟಿ.ವಿ.ಎಸ್ ಮೋಟಾರು ಸೈಕಲ್ ಸಂಖ್ಯೆಃಕೆಎ-47/ಎಕ್ಸ-6151 ಕ್ಕೆ ಎದುರಿನಿಂದ ಡಿಕ್ಕಿ ಹೊಡೆದು ಅಪಘಾತಪಡಿಸಿದ್ದರಿಂದ, ನೀವು ಭಾರತೀಯ ದಂಡ ಸಂಹಿತೆ ಕಲಂ 279 ರ ಪ್ರಕಾರ ಅಪರಾಧ ಎಸಗಿರುತ್ತಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

2.ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಮೇಲೆ ಹೇಳಿದ ರೀತಿ ಅಪಘಾತವನ್ನ ಉಂಟುಮಾಡಿದ್ದರಿಂದ, ಮೋಟಾರು ಸೈಕಲ್ ಸವಾರನಾದ ಮೃತ ಗಣೇಶ ತಿಮ್ಮು ಗೌಡರವರಿಗೆ ತಲೆ, ಮೈಗೆ, ಮುಖಕ್ಕೆ ಮಾರಣಾಂತಿಕ ಗಾಯಗಳಾಗಿದ್ದು,

ಅವರನ್ನು ಚಿಕಿತ್ಸೆಗಾಗಿ ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ದಿನಾಂಕಃ 02-05-2023 ರಂದು ಬೆಳಿಗ್ಗೆ 11-29ರ ಸಮಯಕ್ಕೆ ಮರಣ ಹೊಂದಿದ್ದು, ಅವರ ಮರಣವು ನಿಮ್ಮ ನಿರ್ಲಕ್ಷತನದಿಂದ ಉಂಟಾದ ಮಾನವ ಹತ್ಯೆಯಲ್ಲದ ಮರಣವಾದ್ದರಿಂದ, ನೀವು ಭಾರತೀಯ ದಂಡ ಸಂಹಿತೆ ಕಲಂ 304(ಎ)ರ ಪ್ರಕಾರ ಅಪರಾಧ ಎಸಗಿರುತ್ತಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

3.ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1ನೇ ಆರೋಪಿಯಾದ ನೀವು ವಾಹನ ಚಾಲನಾ ಪರವಾನಿಗೆ ಹೊಂದದೇ ಹಿರೋ ಹೊಂಡಾ ಸ್ಪೆಂಡರ್ ಪ್ಲಸ್ ಮೋಟಾರು ಸೈಕಲ್‌ನ್ನು ಚಾಲನೆ ಮಾಡಿದ್ದರಿಂದ ನೀವು ಮೋಟಾರ್ ವಾಹನ ಕಾಯ್ದೆ ಕಲಂ 181 ಸಹವಾಚಿತ ಕಲಂ 3(1)ರ ಪ್ರಕಾರ ಅಪರಾಧ ಎಸಗಿರುತ್ತಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

4.ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1ನೇ ಆರೋಪಿಯಾದ ನೀವು ನಿಮ್ಮ ಮಾಲಿಕತ್ವದ ಹಿರೋ ಹೊಂಡಾ ಸ್ಪೆಂಡರ್ ಪ್ಲಸ್ ಮೋಟಾರು ಸೈಕಲ್ಲಿಗೆ ವಿಮೆ ಮಾಡಿಸದೆ ರಸ್ತೆಯ ಮೇಲೆ ಚಾಲನೆ ಮಾಡಿದ್ದರಿಂದ, ನೀವು ಮೋಟಾರ್ ವಾಹನ ಕಾಯ್ದೆ ಕಲಂ 196 ಸಹವಾಚಿತ ಕಲಂ 146ರ ಪ್ರಕಾರ ಅಪರಾಧ ಎಸಗಿರುತ್ತಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

ಪ್ರಶ್ನೆ 1. ನೀವು ಸದ್ರಿ ಆರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ?

ಉತ್ತರಃ

ಪ್ರಶ್ನೆ 2. ನಿಮ್ಮ ಪರವಾಗಿ ಯಾವುದಾದರೂ ಪ್ರತಿರಕ್ಷ ಸಾಕ್ಷ್ಯ ಇದೆಯೇ?

ಉತ್ತರಃ

**(ಆರೋಪಣೆಯನ್ನ 1ನೇ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, 1ನೇ ಆರೋಪಿಯು ನೀಡಿದ ಉತ್ತರವನ್ನ ಯಾಥವತ್ತಾಗಿ ದಾಖಲಿಸಿಕೊಳ್ಳಲಾಯಿತು.)**

**ಸಹಿ ಇದೆ.**

ದಿನಾಂಕಃ 01-08-2024 **(ಶ್ರೀ ಬಿ.ಸಿ. ಚಂದ್ರಶೇಖರ್)**

ಸ್ಥಳಃ ಹೊನ್ನಾವರ **ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**